# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 20, ಗಂಗಾನಗರ, ಬೆಂಗಳೂರು

ಸಂಖ್ಯೆ:ಸ.ಅ/ವಾ-20/ಪಿ.ಆರ್./18/2020-21 ದಿನಾಂಕ: 04/09/2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿ.ಎಂಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್./35/2021 ದಿನಾಂಕ 05/12/2020 ರವರ ಆದೇಶದಂತೆ ದಿನಾಂಕ 04/09/2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.20, ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

### ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ. ಬಿ.ಎಸ್. ಪ್ರಹಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಮ್‌ರಾವ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ನಂ.20 |
| 3 | ಶ್ರೀ. ಎಸ್. ಬಸವರಾಜ್ | ಆರ್.ಟಿ.ನಗರ ಪಿ.ಎಸ್. |
| 4 | ಶ್ರೀಮತಿ ಶಾಲಿನಿ ದೇಶ್‌ಪಾಂಡೆ | ಅಸೋಸಿಯೇಷನ್ ಪ್ರೆಸಿಡೆಂಟ್, ಹೆಚ್.ಎಂ.ಟಿ. ಲೇಔಟ್ |
| 5 | ಶ್ರೀ. ಆರ್.ಆರ್. ಭಕ್ತಾಳ್ | ಸಾರ್ವಜನಿಕರು |
| 6 | ಶ್ರೀ. ಶ್ರೀನಿವಾಸ್ | ಸಾರ್ವಜನಿಕರು |
| 7 | ಶ್ರೀ. ಎಂ.ಆರ್. ಪ್ರಸಾದ್ | ಸಾರ್ವಜನಿಕರು |
| 8 | ಶ್ರೀ. ಬಿ. ವಿಜಯ್ ವಿ. ಗೌಡ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಬಿ.ಎಸ್. ಪ್ರಹಲಾದ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ.20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಕರಿಗೆ ತಿಳಿಯಪಡಿಸಿದರು.

- ವಾರ್ಡಿನಲ್ಲಿ ಮರದ ರೆಂಬೆಗಳನ್ನು ಸ್ವಚ್ಛವಾಗಿ ತೆಗೆಯುವುದರ ಕುರಿತು ಚರ್ಚೆ ಮಾಡಿದರು.
- ವಾರ್ಡ್‌ಗಳಲ್ಲಿ ಓಎಫ್‌ಸಿ ಕೇಬಲ್‌ಗಳು ನೇತಾಡುವುದನ್ನು ತೆರವುಗೊಳಿಸುವ ಕುರಿತು ಚರ್ಚೆ ಮಾಡಿದರು.
- ಪ್ರೆಸಿಡೆನ್ಸಿ ಗ್ರೌಂಡ್ ಮತ್ತು ಶಾಲೆಯ ಪಕ್ಕ ಕಾರ್ನರ್ ಅಗೆದು ಬಿಟ್ಟಿರುವ ಗುಂಡಿಯನ್ನು ಮುಚ್ಚಿಸುವ ವಿಷಯ ಕುರಿತು ಚರ್ಚೆ ಮಾಡಿದರು.
- ಸಿಬಿಐ ರೋಡ್ ರಾಮ್‌ರಾಜ್ ಅಂಗಡಿ ಮುಂದೆ ಮಳೆ ನೀರು ನೇರವಾಗಿ ಮೋರಿಗೆ ಹೋಗುವಂತೆ ಅನುಕೂಲ ಮಾಡಿಕೊಡುವ ಕುರಿತು ಚರ್ಚೆ ಮಾಡಿದರು.

- ಪಿಳ್ಳಪ್ಪ ಬ್ಲಾಕ್ ಎಲ್ಲಾ ಕ್ರಾಸ್‌ನ ಚೇಂಬರ್‌ಗಳಲ್ಲಿ ಮಣ್ಣು ತುಂಬಿಕೊಂಡಿರುವುದನ್ನು ಸ್ವಚ್ಛಗೊಳಿಸುವ ಕುರಿತು ತಿಳಿಸಿದರು.

- ಸಿಬಿಐ ಮುಖ್ಯ ರಸ್ತೆಯ ಮೋರ್ ಅಂಗಡಿಯ ಪಕ್ಕದಲ್ಲಿ ದೊಡ್ಡದಾಗಿರುವ ಹಂಪ್ಸ್ ಹಾಕಿರುವುದರಿಂದ ಬೈಕ್‌ಗಳಿಗೆ ತೊಂದರೆಯಾಗುತ್ತಿದ್ದು, ಮತ್ತು ಆಂಬುಲೆನ್ಸ್‌ಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಅದನ್ನು ಸರಿಪಡಿಸುವ ವಿಷಯ ಕುರಿತು ಚರ್ಚೆ ಮಾಡಿದರು.

- ಹೆಚ್.ಜಿ.ಹೆಚ್. ಲೇಔಟ್ ಪಾರ್ಕ್‌ನಲ್ಲಿ ಹಾಕಿರುವ ಮಕ್ಕಳ ಆಟಿಕೆಗಳ ಸಾಮಾನುಗಳು ತೀರ ಕಳಪೆದಾಗಿರುತ್ತದೆ. ಅದನ್ನು ವೀಕ್ಷಿಸಿ ಸರಿಪಡಿಸಬೇಕೆಂದು ತಿಳಿಸಿದರು.

- ಮಾಸ್ಕ್‌ಗಳು ಕಡ್ಡಾಯವಾಗಿ ಧರಿಸಬೇಕು ಎಂದು ತಿಳಿಯಪಡಿಸಿದರು.

**ಕಾರ್ಯದರ್ಶಿಗಳು**
**ಹಾಗೂ ಸಹಾಯಕ ಅಭಿಯಂತರರು**
ವಾರ್ಡ್ ನಂ.20

**ಅಧ್ಯಕ್ಷರು**
**ಹಾಗೂ ನೋಡಲ್ ಅಧಿಕಾರಿಗಳು**
ವಾರ್ಡ್ ನಂ.20

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು(ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
9. ಸಹಾಯಕ ಅಭಿಯಂತರರು (ವಿದ್ಯುತ್/ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10. ಕಛೇರಿ ಕಡತಕ್ಕೆ.